# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577002.

ದೂರವಾಣಿ ಸಂಖ್ಯೆ: 08192-208029


ಸಂಖ್ಯೆ: ದಾವಿವಿ/ಶೈ/43/2017-18 /4751 ದಿನಾಂಕ: 10-10-2017

## :ಸುತ್ತೋಲೆ:

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಪದವಿಗಳ ಪ್ರವೇಶಾನುಮೋದನೆ ಬಗ್ಗೆ.

ಉಲ್ಲೇಖ: ವಿವಿ ನಿಲಯದ ಪರಿಷ್ಕೃತ ಅಧಿಸೂಚನೆ ಕ್ರಮ ಸಂಖ್ಯೆ: ದಾವಿವಿ/ಶೈಕ್ಷಣಿಕ/AC-1/184/1058/2017-18, ದಿನಾಂಕ: 08-06-2017.

************

ವಿಶ್ವವಿದ್ಯಾನಿಲಯದ ಉಲ್ಲೇಖಿತ ಪರಿಷ್ಕೃತ ಅಧಿಸೂಚನೆಯಲ್ಲಿ 2017-18ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಶೈಕ್ಷಣಿಕ ವೇಳಾಪಟ್ಟಿಯನ್ನು ಹಾಗೂ ಸೂಚನೆಗಳನ್ನು ಪರಿಚಲಿಸಲಾಗಿತ್ತು. ಸದರಿ ಅಧಿಸೂಚನೆಯ ಪುಟ (3) ರಲ್ಲಿನ **"ಇತರೆ ಸೂಚನೆಗಳು"** ಶೀರ್ಷಿಕೆಯಡಿ ಪರಿಚಲಿಸಲಾಗಿರುವ **ಕ್ರಮ ಸಂಖ್ಯೆ:6** ರಲ್ಲಿ **"ಹೊರರಾಜ್ಯದ, ಹೊರದೇಶದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವ ಮೊದಲು ವಿಶ್ವವಿದ್ಯಾನಿಲಯದಿಂದ ಅರ್ಹತಾ ಪ್ರಮಾಣ ಪತ್ರ ಪಡೆಯಬೇಕು. ಅಲ್ಲದೆ, ರಾಜ್ಯದ ವಿದ್ಯಾರ್ಥಿಗಳ ಹಾಗೂ ಇತರೆ ರಾಜ್ಯದ ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಯನ್ನು ಪ್ರತ್ಯೇಕವಾಗಿ ಸಲ್ಲಿಸುವುದು"** ಎಂದು ತಿಳಿಸಲಾಗಿತ್ತು.

ಆದಾಗ್ಯೂ, ಕಾಲೇಜುಗಳ ವತಿಯಿಂದ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪ್ರವೇಶಾತಿ ಅನುಮೋದನೆಯ ಪಟ್ಟಿಯಲ್ಲಿ **"ರಾಜ್ಯದ"** ಅಥವಾ **"ಹೊರ ರಾಜ್ಯದ"** ವಿದ್ಯಾರ್ಥಿಗಳ ಪಟ್ಟಿಯನ್ನು **ಪ್ರತ್ಯೇಕವಾಗಿ ಗುರುತಿಸಿ ಸಲ್ಲಿಸಿರುವುದಿಲ್ಲ.** ಪ್ರಾಂಶುಪಾಲರುಗಳು ವಿಶ್ವವಿದ್ಯಾನಿಲಯದ ಸೂಚನೆಗಳನ್ನು ಜಾಗರೂಕತೆಯಿಂದ ಪಾಲಿಸಿಲ್ಲದಿರುವುದು ವಿಷಾದನಿಯ.

ಈ ಹಿನ್ನಲೆಯಲ್ಲಿ ಪುನಃ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಹೊರ ರಾಜ್ಯದಲ್ಲಿನ ವಿದ್ಯಾ ಸಂಸ್ಥೆಗಳಲ್ಲಿ 10+2 ಹಂತದಲ್ಲಿ ಉತ್ತೀರ್ಣರಾಗಿದ್ದು 2017-18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಪದವಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರಗಳನ್ನು ತಾವು ಕ್ರೋಢಿಕರಿಸಿ, ನಿಗದಿತ ಪ್ರವೇಶಾತಿ ಅನುಮೋದನೆ ಪಟ್ಟಿಯನ್ನು ಅಧಿಕೃತ ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾನಿಲಯಕ್ಕೆ ದಿನಾಂಕ:21-10-2017ರೊಳಗೆ ಸಲ್ಲಿಸಲು ತಿಳಿಸಲಾಗಿದೆ. ವಿಶ್ವವಿದ್ಯಾನಿಲಯದ ಕಾನೂನು/ನಿರ್ದೇಶನಗಳನ್ನು ನಿರ್ಲಕ್ಷಿಸಿದಲ್ಲಿ, ಅಂತಹವರ ವಿರುದ್ಧ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಸೂಕ್ತಕ್ರಮ ಕೈಗೊಳ್ಳಲಾಗುವುದೆಂಬುದನ್ನು ತಿಳಿಸಲು ನಿರ್ದೇಶಿತನಾಗಿದ್ದೇನೆ.

ಆದೇಶಾನುಸಾರ,

(ಡಾ॥ ಎಸ್.ವಿ. ಹಲ್ಸೆ)

ಕುಲಸಚಿವರು.

ಕುಲಸಚಿವರು ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ - 577002

ಗೆ,

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:-

1. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಕಛೇರಿ ಪ್ರತಿ.

Suttole 92